ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)
ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಹೊಸಹಳ್ಳಿ

ಸಂ/ಕಂ/ಹ.ಬ./ನಾಕಹೊ/110/2015-16. ದಿನಾಂಕ:06-06-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಕೆ.ಎಂ.ಶರಣಯ್ಯ ತಂದೆ ಲೇಟ್ ಸಿದ್ದಯ್ಯ<br>2)ಕೆ.ಎಂ.ಬಿ.ಸಿದ್ದೇಶ್ವರಯ್ಯ ತಂದೆ ಲೇಟ್ ಬಸಯ್ಯ<br>ಕಲ್ಲಹಳ್ಳಿ ಗ್ರಾಮ<br>ಕೂಡ್ಲಿಗಿ ತಾಲೂಕು | ಕಂದಾಯ ಪರಿವೀಕ್ಷಕರು<br>ಹೊಸಹಳ್ಳಿ |
| ಕೂಡ್ಲಿಗಿ ತಾಲೂಕು ಕಲ್ಲಹಳ್ಳಿ ಗ್ರಾಮದ ಸನಂ 72/2. ವಿಸ್ತೀರ್ಣ 0-03 ಸೆಂಟ್ಸು ಜಮೀನನ್ನು ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಕಲ್ಲಹಳ್ಳಿ ಗ್ರಾಮದ ಸನಂ 72/2. ವಿಸ್ತೀರ್ಣ 0-03 ಸೆಂಟ್ಸು ಜಮೀನನ್ನು ಸದರಿ ಗ್ರಾಮದ ಕೆ.ಎಂ.ಶರಣಯ್ಯ ತಂದೆ ಲೇಟ್ ಸಿದ್ದಯ್ಯ ಇವರು ದಿನಾಂಕ 08-06-2013 ರ ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಕಲ್ಲಹಳ್ಳಿ ಇವರು ನಮೂನೆ-21 ನೋಟಿಸನ್ನು ದಿನಾಂಕ 02-11-2015 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ಜಮೀನು ಪಾಲು ವಿಭಾಗ ಇರುವುದರಿಂದ ಖಾತಾ ಬದಲಾವಣೆ ಮಾಡಲು ಬರುವುದಿಲ್ಲದ ಕಾರಣ ಈ ಪ್ರಕರಣವನ್ನು ಎಂ.ಆರ್.ನಂಬರ್: 07/2015-16. ದಿನಾಂಕ 03-12-2015 ರಲ್ಲಿ ಗೈರು ಮಂಜೂರು ಮಾಡಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 03-05-2016 ರಿಂದ 06-06-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಕಲ್ಲಹಳ್ಳಿ ಗ್ರಾಮದ ಸನಂ 72/2. ವಿಸ್ತೀರ್ಣ 0-03 ಸೆಂಟ್ಸು ಜಮೀನನ್ನು ದಿನಾಂಕ 08-06-2013 ರ ಪಾಲು ವಿಭಾಗದ ಪತ್ರ ಪ್ರಕಾರ ನನ್ನ ಹಿಸ್ಯಾಕ್ಕೆ ಬಂದಿರುತ್ತದೆ. ಅದರಂತೆ ಅಳತೆ ಮಾಡಿಸಿ 11ಇ. ನಕ್ಷೆಯನ್ನು ಪಡೆದಿರುತ್ತೇನೆ. ಕಾರಣ ಸದರಿ ಪಾಲು ವಿಭಾಗದ ಪತ್ರ ಹಾಗೂ 11ಇ. ನಕ್ಷೆ ಪ್ರಕಾರ ನನ್ನ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆಗಳನ್ನು ಕೇಳಿ ಲಭ್ಯವಿದ್ದ ದಾಖಲೆಗಳ ಪಾಲು ವಿಭಾಗದ ಪತ್ರ ಹಾಗೂ 11ಇ.ನಕ್ಷೆ ಪ್ರಕಾರ ಈ ಕೆಳಗಿನಂತೆ ಈ ಆದೇಶ ಮಾಡಲಾಗಿದೆ.

# –:ಆದೇಶ:–

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಕಲ್ಲಹಳ್ಳಿ ಗ್ರಾಮದ ಸನಂ 72/2. ವಿಸ್ತೀರ್ಣ 0–03 ಸೆಂಟ್ಸು ಜಮೀನನ್ನು ದಿನಾಂಕ 08–06–2013 ರ ಪಾಲು ವಿಭಾಗದ ಪತ್ರ ಹಾಗೂ 11ಇ. ನಕ್ಷೇ ಪ್ರಕಾರ ಅರ್ಜಿದಾರರಾದ ಕೆ.ಎಂ.ಶರಣಯ್ಯ ತಂದೆ ಲೇಟ್ ಸಿದ್ದಯ್ಯ ಇವರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ. ಹಾಗೂ ಮುದ್ರಾಂಕ ಶುಲ್ಕ ಪಾವತಿಸಲು ಸಹಾ ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 06–06–2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಹೊಸಹಳ್ಳಿ
ಹೊಸಹಳ್ಳಿ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಕೆ.ಎಂ.ಶರಣಯ್ಯ ತಂದೆ ಲೇಟ್ ಸಿದ್ದಯ್ಯ. ಕೆ.ಎಂ.ಬಿ.ಸಿದ್ದೇಶ್ವರಯ್ಯ ತಂದೆ ಬಸಯ್ಯ, ಕಲ್ಲಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ಕಂದಾಯ ಪರಿವೀಕ್ಷಕರು ಹೊಸಹಳ್ಳಿ ಇವರ ಮಾಹಿತಿಗಾಗಿ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.